ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂ. 7 ಸಂ. 3 ಮಾರ್ಚ್ 2010 ರೂ.15

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

ಅನು: ಶ್ಯಾಮಲಾದೇವಿ

ಒಬ್ಬರು ನನಗೆ ಹೇಳಿದರು, “ಲೈಟ್ ಮಾಸ್ಟರ್ ಒಬ್ಬರು, ಕೆಲವರು ಗುರುಗಳೊಂದಿಗೆ ವಿಚಾರ ವಿನಿಮಯ ಮಾಡುತ್ತಿದ್ದಾಗ ಅದನ್ನು ಮುಂದುವರೆಸಲಾಗಲಿಲ್ಲ ಏಕೆಂದರೆ ಅವರು ಹಳೆಯ ಜ್ಞಾನ ಮತ್ತು ಹಳೆಯ ಚೈತನ್ಯಗಳಲ್ಲಿ ಆಳವಾಗಿ ಬೇರೂರಿದ್ದರು. ಅವರು ಹೊಸ ಜ್ಞಾನ ಮತ್ತು ಹೊಸ ಚೈತನ್ಯಗಳಿಂದ ತಮ್ಮನ್ನು ತಾವು ಆಧುನೀಕರಿಸಿಕೊಂಡಿರಲಿಲ್ಲ.” ಮಾತು ಮುಂದುವರೆಸಲಾಗದೆ ಲೈಟ್ ಮಾಸ್ಟರ್ ಮೌನವಾಗಿದ್ದರು. ಅನೇಕ ಸಂದರ್ಭಗಳಲ್ಲಿ ನನ್ನ ಗುರು ಮೌನವಾಗಿರುತ್ತಿದ್ದರು. ಮೌನದಿಂದಿರುವುದು, ಅನೇಕರೊಂದಿಗೆ ನನ್ನ ವಿಚಾರ ವಿನಿಮಯದ ಒಂದು ಭಾಗವಾಗಿದೆ.

ಹಳೆಯದು ಅಪ್ಪಟ ಚಿನ್ನ. ಆದರೆ ಸ್ವಲ್ಪ ಕಾಲದ ನಂತರ ಅದಕ್ಕೆ ಹೊಳಪು ಕೊಡಬೇಕಾಗುತ್ತದೆ.

ಜ್ಞಾನಕ್ಕೆ ಪೂರ್ಣವಿರಾಮಗಳಿಲ್ಲ. ನಾವು ಹೆಚ್ಚು ಕಲಿತಂತೆ, ಕಲಿಯುವುದು ಇನ್ನೂ ಹೆಚ್ಚು ಇರುತ್ತದೆ. ಇತ್ತೀಚಿನ ದಶಕಗಳಲ್ಲಿ, ಬೆಳಕಿನ ಕಾರ್ಯಕರ್ತರು ಹೊಸ ಸತ್ಯಗಳ ಬಗ್ಗೆ ಅಪಾರವಾದ ಜ್ಞಾನವನ್ನು ಚಾನಲ್ ಮಾಡಿದ್ದಾರೆ. ನಮ್ಮ ವಿಜ್ಞಾನಿಗಳು ಇನ್ನೂ ಈ ಜ್ಞಾನವನ್ನು ವಿಶ್ಲೇಷಿಸಿ, ಅರ್ಥಮಾಡಿಕೊಳ್ಳಬೇಕಾಗಿದೆ. ಈಗ, ಸ್ವಾಭಾವಿಕವಾಗಿಯೇ ಅವರು ಇದನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಆಧ್ಯಾತ್ಮಿಕ ಮುಖಂಡರು ಇದರ ಬಗ್ಗೆ ಅರಿವಿಲ್ಲದವರಾಗಿದ್ದಾರೆ. ಹಳೆಯ ಜ್ಞಾನದಿಂದಷ್ಟರಲ್ಲೇ ಸಂತೃಪ್ತರಾಗಿದ್ದಾರೆ. ಅವರು ಹೊಸದಕ್ಕೆ ತೆರೆದುಕೊಂಡಿಲ್ಲ. ಹೀಗಿರುವಾಗ, ಈಗಿನ ಮತ್ತು ಮುಂದಿನ ಜನಾಂಗಗಳು ಹೊಸ ಸತ್ಯಗಳನ್ನು ಎದುರಿಸಲು ಅವರು ಹೇಗೆ ಮಾರ್ಗದರ್ಶಿಸಬಲ್ಲರು?

ಲೈಟ್ ಮಾಸ್ಟರ್, ಸ್ವಾಭಾವಿಕವಾಗಿ, ಅವರೊಂದಿಗೆ ವಿಚಾರ ವಿನಿಮಯ ಮಾಡಲಾಗಲಿಲ್ಲ, ಮತ್ತು ಕಡೆಯವರೆಗೆ ಮೌನವಾಗಿ ಉಳಿದರು.

ವಿಚಾರ ವಿನಿಮಯದಲ್ಲಿ ಅನೇಕ ಮಟ್ಟಗಳಿವೆ, ಭೌತಿಕ ಮಟ್ಟದಲ್ಲಿ ಕೂಡ ಹಲವು ಮಟ್ಟಗಳಿವೆ. ಕೆಳಮಟ್ಟ ಮತ್ತು ಮೇಲ್ಮಟ್ಟಗಳಿವೆ. ಅಜ್ಞಾನ ಮತ್ತು ಮೊಂಡುತನಗಳ ಮಟ್ಟಗಳಿವೆ. ಅರಿವು ಮತ್ತು ದಿವ್ಯದರ್ಶನಗಳ ಮಟ್ಟಗಳಿವೆ. ಒಬ್ಬ ಶ್ರೇಷ್ಠ ರಾಜಕೀಯ ಧುರೀಣನ ಹೇಳಿಕೆ ನನ್ನ ನೆನಪಿಗೆ ಬರುತ್ತದೆ, “ನಾನು ಇಡೀ ಪ್ರಪಂಚದ ಬಗ್ಗೆ ಕನಸುಗಳನ್ನು ಒಬ್ಬ ಲೀಡರ್ ಬಳಿ ತೆಗೆದುಕೊಂಡು ಹೋದೆ. ಆದರೆ ಅವರು ತಮ್ಮ ದೇಶದ ಬಗ್ಗೆ ಮಾತ್ರ ಮಾತನಾಡಿದರು. ನಾನು ಅವರೊಂದಿಗೆ ಮುಂದೆ ಮಾತನಾಡಲಾಗಲಿಲ್ಲ.”

ಕಾಮನಬಿಲ್ಲುಗಳ ಮೇಲೇರಿ ಹೋಗುವ ಮತ್ತು ಕನಸುಗಳನ್ನು ಬೆನ್ನಟ್ಟುವಂತಹ ಅತ್ಯುನ್ನತ ಮಟ್ಟಗಳಲ್ಲಿ ನನ್ನೊಂದಿಗೆ ವ್ಯವಹರಿಸುವಂತೆ ನಾನು ನನ್ನ ಜನರಿಗೆ ಬಹಳ ಹೇಳುತ್ತೇನೆ. ನಾವು ಧೈರ್ಯಮಾಡಬೇಕು. ನಾವು ಸಾಹಸಮಾಡಬೇಕು. ಇಲ್ಲದಿದ್ದರೆ, ನಾವು ಬೆಳೆಯುವುದಿಲ್ಲ. ಅನೇಕರು ನನ್ನನ್ನು ಅರ್ಥಮಾಡಿಕೊಳ್ಳುವುದಿಲ್ಲವೆಂದು ನನಗೆ ಗೊತ್ತಿದೆ. ಆದರೆ ನಾನು ಕಾಯುತ್ತೇನೆ. ರೆಕ್ಕೆಗಳು ಬೆಳೆಯಲು ನಾನು ಕಾಯುತ್ತೇನೆ. ಕಣ್ಣುಗಳನ್ನು ತೆರೆಯಲು ಕಾಯುತ್ತೇನೆ.

ತಾಳ್ಮೆಯಿಂದ ಕಾಯುವುದು ನನ್ನ ಕೆಲಸದ ಒಂದು ಭಾಗ.

ಶ್ರೀಧರ್ ಮತ್ತು ಮನೋಜ್‌ರ ಮುಂದಾಳತ್ವದಲ್ಲಿ ಐವತ್ತಕ್ಕೂ ಹೆಚ್ಚು ಧ್ಯಾನಿಗಳು ಒಂದು ಇತಿಹಾಸವನ್ನು ಸೃಷ್ಟಿಸಿದ್ದಾರೆ. ಅವರು ಅನೇಕ ಪಟ್ಟಣಗಳಲ್ಲಿ ಅನೇಕ ಶಾಲೆಗಳಿಗೆ ಹೋಗಿ, ಸಾವಿರಾರು ವಿದ್ಯಾರ್ಥಿಗಳು ಬೆಳಕನ್ನು ಚಾನಲ್ ಮಾಡುವುದಕ್ಕೆ ಕೆಲಸ ಮಾಡಿದರು. ಇದನ್ನು ಬರೆಯುತ್ತಿರುವ ಈ ಸಮಯದಲ್ಲಿ(11 ಫೆಬ್ರವರಿ 2010) ಬೆಳಕನ್ನು ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ 35000 ದಾಟಿದೆ! ಇವರನ್ನು ಅಭಿನಂದಿಸಲು ನನಗೆ ಪದಗಳು ಸಿಗುತ್ತಿಲ್ಲ.

ಚಾನಲಿಂಗ್ ಮಾಡಿದಾಗ ಅನೇಕ ಚಿಕ್ಕ ಮಕ್ಕಳು ಬೆಳಕನ್ನು ನೋಡಿದರು ಮತ್ತು ಅದನ್ನು ಅನುಭವಿಸಿದರು. ಮಕ್ಕಳು ಮುಗ್ಧರು ಮತ್ತು ಪರಿಶುದ್ಧರು ಆಗಿರುವುದರಿಂದ, ಅವರ ಚಾನಲಿಂಗ್ ಪ್ರಪಂಚಕ್ಕೆ ಇನ್ನಷ್ಟು ಹೆಚ್ಚು ಬೆಳಕನ್ನು ತಂದಿದೆ. ಇದು ಖಂಡಿತವಾಗಿಯೂ ಪ್ರಪಂಚದ ಮೇಲೆ ಬಲವಾದ ಪ್ರಭಾವ ಬೀರುತ್ತದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ 562149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@lightgemasters.com ವೆಬ್-ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

ಡಿಸ್ನಿ ಕಿಡ್ಸ್ ಮಾಂಟೆಸರಿ ಸ್ಕೂಲ್
6ನೇ ಕ್ರಾಸ್, ಜ್ಯೋತಿನಗರ,
ಚಂದ್ರಾ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ತಪೋನಗರದಲ್ಲಿ ಸೂರ್ಯಾಸ್ತದನಂತರ ಸೆರೆಹಿಡಿದ ದೃಶ್ಯ

### ಸುದ್ದಿ–ಸೂಚನೆ

- 1–2–2010ರಂದು ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶಗಳಿಂದ ಸುಮಾರು 30,000ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶ್ರೀಧರ್ ಮತ್ತು ಮನೋಜ್ ಚೋಪ್ರರ ಮುಂದಾಳತ್ವದಲ್ಲಿ 'ಲೈಟ್ ಚಾನಲ್ಸ್' ತಂಡದವರು ಆಯೋಜಿಸಿದ 'ಲೈಟ್ ಚಾನಲಿಂಗ್' ಕಾರ್ಯಕ್ರಮದಲ್ಲಿ ಭಾಗವಹಿಸಿದರು.
- 1–2–2010ರಂದು ನಮ್ಮ ಹೊಸ ವೆಬ್‌ಸೈಟ್ 'www.lightagemasters.com' ಲಾಂಚ್ ಮಾಡಲಾಯಿತು.
- ತಪೋನಗರ ನಿವಾಸಿಗಳ ಗ್ರಂಥಾಲಯವನ್ನು 1–2–2010ರಂದು ಗುರೂಜಿಯವರು ಉದ್ಘಾಟಿಸಿದರು.
- 7–2–2010 ರಂದು 500ಕ್ಕಿಂತಲೂ ಹೆಚ್ಚು ಜನರು ಅಮರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು<br>ಬೆಳಿಗ್ಗೆ 11 ರಿಂದ 12ರವರೆಗೆ<br>ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನಲ್<br>ಬೆಳಿಗ್ಗೆ 10 ರಿಂದ 1 ರವರೆಗೆ |
| 14 ಭಾನುವಾರ | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 21 ಭಾನುವಾರ | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ<br>ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ಸ್ ಗ್ರೂಪ್ ಸಂಧಿಸುತ್ತದೆ |
| 24 ಬುಧವಾರ | ಶ್ರೀರಾಮ ನವಮಿ ವಿಶೇಷ ಧ್ಯಾನ<br>ಮಧ್ಯಾಹ್ನ 12 ರಿಂದ 1ರವರೆಗೆ |

**ಗುರೂಜಿಯವರ ಭಾನುವಾರದ ಉಪನ್ಯಾಸಗಳ ನೇರ ಪ್ರಸಾರವು ವೆಬ್‌ನಲ್ಲಿ ಮೆಂಬರ್‌ಗಳಿಗೆ ಲಭ್ಯವಿದೆ. ಇದರ ಮಾಹಿತಿಗಾಗಿ ಇ–ಮೇಲ್ ಮುಖಾಂತರ ಸಂಪರ್ಕಿಸಬಹುದು.**

ಗುರೂಜಿಯವರ ಉಪನ್ಯಾಸದ DVDಗಳು ಸದಸ್ಯರಿಗೆ ಲಭ್ಯವಿದೆ. ವಿವರಗಳಿಗೆ ನಮ್ಮ ಆಫೀಸನ್ನು ಸಂಪರ್ಕಿಸಿ.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 03–01–10 | ಅಪೂರ್ವ ದೇಶ್‌ಪಾಂಡೆ ಮತ್ತು ಫೆರೋಜ಼ ಪಾಂಡೆ |
| 10–01–10 | ರಾಕೇಶ್ ಮಿಶ್ರಾ |
| 17–01–10 | ಕೆ. ಹೆಚ್. ಪ್ರಭುದೇವ |
| 24–01–10 | ಹರೇಶ್ ಶೆಟ್ಟಿ |
| 31–01–10 | ಪ್ರಮೀಳಾ ಮಹಾತ್ರ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 08 | ಸೋಮ | ಕೃಷ್ಣಾಷ್ಟಮಿ |
| 14 | ಭಾನು | ಮಾಸ ಶಿವರಾತ್ರಿ |
| 15 | ಸೋಮ | ಅಮಾವಾಸ್ಯೆ |
| 16 | ಮಂಗಳ | ಚಾಂದ್ರಮಾನ ಯುಗಾದಿ |
| 23 | ಮಂಗಳ | ಶುಕ್ಲಅಷ್ಟಮಿ |
| 24 | ಬುಧ | ಶ್ರೀರಾಮ ನವಮಿ |
| 25 | ಗುರು | ಶುಕ್ಲದಶಮಿ |
| 30 | ಮಂಗಳ | ಪೂರ್ಣಿಮಾ/ಹನುಮಾನ್ ಜಯಂತಿ |

**20–03–2010 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

### ಆನೇಕಲ್ ಕೇಂದ್ರದ ಕಾರ್ಯಕ್ರಮ

- 1–2–2010ರಂದು ಅಮರ ಜಯಂತಿಯನ್ನು ಆಚರಿಸಲಾಯಿತು. ಬೆಂಗಳೂರಿನ ಇತರ ಕೇಂದ್ರಗಳ ಸಾಧಕರು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ಅಮರ ಜಯಂತಿ ಕಾರ್ಯಕ್ರಮದ ಸಂದರ್ಭದಲ್ಲಿ ಆನೇಕಲ್‌ನ ಕೇಂದ್ರದ ಬೆಳಕಿನ ಕಾರ್ಯಕರ್ತರು ಸುಮಾರು 2000 ವಿದ್ಯಾರ್ಥಿಗಳಿಂದ ಲೈಟ್ ಚಾನಲಿಂಗ್–ಅನ್ನು ಮಾಡಿಸಿದರು.

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## 2010 ಫೆಬ್ರವರಿ 1ರಂದು ನಡೆಸಿದ ಲೈಟ್ ಚಾನಲಿಂಗ್ ಸೆಷನ್



ಬಿಬಿಎಂಪಿ ಜೂನಿಯರ್ ಕಾಲೇಜು
ಬೆಂಗಳೂರು



ಚೈತನ್ಯ ಪ್ರೌಢಶಾಲೆ
ಬೆಂಗಳೂರು



ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ
ಬೆಂಗಳೂರು



ಆರ್‌ಪಿಇಐ ಕಾಲೇಜು
ಬೆಂಗಳೂರು



ಸೌತ್ ಈಸ್ಟ್ ವಿಷ್ಯಾ ಎಜುಕೇಶನಲ್
ಇನ್‌ಸ್ಟಿಟ್ಯೂಟ್, ಬೆಂಗಳೂರು



ಸಿಇಎಸ್
ಬೆಂಗಳೂರು



ಸೈಂಟ್. ಮೀರಾ ಹೈಸ್ಕೂಲ್
ಬೆಂಗಳೂರು



ಎಂಎಸ್ ಕಾನ್ವೆಂಟ್, ಆರ್.ಟಿ.ನಗರ
ಬೆಂಗಳೂರು

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

**3-01-2010**

ಈ ವರ್ಷ, ಅದ್ಭುತ ಮತ್ತು ಹೊಸ ಪ್ರಾರಂಭಗಳ ವರ್ಷ. ಅದು ಗ್ರಹಣದಿಂದ ಪ್ರಾರಂಭವಾಗಿದೆ. ಗ್ರಹಣಗಳು ಯಾವಾಗಲೂ ಹೊಸ ಚೈತನ್ಯಗಳನ್ನು ತರುವುದಲ್ಲದೆ ಹೊಸ ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಆರಂಭಿಸುತ್ತವೆ ಮತ್ತು ಹಳೆಯ ಪ್ರಕ್ರಿಯೆಗಳನ್ನು ಬಲಗೊಳಿಸುತ್ತವೆ; ಅಲ್ಲದೆ ಅವು ಅನೇಕ ರೀತಿಗಳಿಂದ ನಮಗೆ ಸಹಾಯ ಮಾಡುತ್ತವೆ. ಈ ಚೈತನ್ಯಗಳಿಗೆ ನಾವು ತೆರೆದುಕೊಳ್ಳಬೇಕು, ಅವುಗಳನ್ನು ಸ್ವೀಕರಿಸಿ, ಪ್ರಕ್ರಿಯೆಗಳು ಸಕ್ರಿಯ ವಾಗಲು ಮತ್ತು ಬಲಗೊಳ್ಳಲು ಅವಕಾಶ ಕೊಡಬೇಕು. ಈ ಚೈತನ್ಯಗಳಿಗೆ ಬುದ್ಧಿ ಶಕ್ತಿಯಿರುತ್ತವೆ. ಅವುಗಳನ್ನು ಒಪ್ಪಿಕೊಳ್ಳದೆ, ಬದಲಾವಣೆಯಾಗಲು ತಿರಸ್ಕರಿಸಿದರೆ, ನಾವು ಒಪ್ಪಿಕೊಳ್ಳಲೇ ಬೇಕಾದಂಥ ಪರಿಸ್ಥಿತಿಯನ್ನು ಅವು ಸೃಷ್ಟಿ ಮಾಡುತ್ತವೆ. ಹೀಗಾಗಿ ಕೆಲವು ಕಲಿಕೆಯ ಅನುಭವಗಳಿಗೆ ನಾವು ಒಳಗಾಗಬೇಕಾಗುತ್ತದೆ.

ನಾವು ಫೋಟಾನ್ ಬೆಲ್ಟ್‌ನ ಒಂದು ಪದರದೊಳಕ್ಕೆ ಪ್ರವೇಶಿಸಿದ್ದೇವೆ. ಅದು ನಮ್ಮಲ್ಲಿ ಮತ್ತು ಪ್ರಪಂಚದಲ್ಲಿ ಅಗಾಧವಾದ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ. ನಮ್ಮ ಸುತ್ತಮುತ್ತಲಿರುವ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಬದಲಾವಣೆಗಳ ಪ್ರಾರಂಭವನ್ನು ನೋಡಬಹುದು. ಪ್ರಕ್ಷುಬ್ಧತೆಯ ನಂತರ ಹಳೆಯ ವ್ಯವಸ್ಥೆಗಳು ಕುಸಿದು ಬೀಳುತ್ತವೆ ಮತ್ತು ಹೊಸ ವ್ಯವಸ್ಥೆಗಳು ಕಾಣಿಸಿಕೊಳ್ಳುತ್ತವೆ.

ಪ್ರಪಂಚ ಕೊನೆಗೊಳ್ಳುವುದಿಲ್ಲ ಎಂಬ ವಿಷಯವನ್ನು ನಾವೆಲ್ಲ ಸ್ಪಷ್ಟವಾಗಿ ತಿಳಿದಿರೋಣ. ಒಂದು ಕ್ರಿಯಾತ್ಮಕ ಯೋಜನೆಯನ್ನು ಆಧ್ಯಾತ್ಮಿಕವಾಗಿ ಅನುಸರಿಸಿ, ಆದರೆ ಯಾವುದೇ ತೀವ್ರ ಸ್ವರೂಪದ ಬದಲಾವಣೆಗಳನ್ನು ನಿಮ್ಮ ಲೌಕಿಕ ಜೀವನದಲ್ಲಿ ತರಬೇಡಿ. ನಾನು ಒಂದು ಕ್ರಿಯಾತ್ಮಕ ಯೋಜನೆಯನ್ನು ಸೂಚಿಸುತ್ತೇನೆ. ಅದನ್ನು ನೀವು ಹಾಗೆಯೇ ಅಥವಾ ಅಲ್ಪ ಸ್ವಲ್ಪ ಮಾರ್ಪಾಡಿನೊಂದಿಗೆ ಪಾಲಿಸಬಹುದು.

1. ಪ್ರತಿದಿನವೂ ಸಪ್ತರ್ಷಿ ಪ್ರಾಣಾಯಾಮವನ್ನು ಏಳು ಬಾರಿ ಅಭ್ಯಾಸ ಮಾಡಿ, ಕನಿಷ್ಠ ಏಳು ನಿಮಿಷಗಳು ನೀಲಿ ಬೆಳಕನ್ನು ಚಾನಲ್ ಮಾಡಿ, ಕನಿಷ್ಠ ಒಂದು ಘಂಟೆಯ ಧ್ಯಾನಾಭ್ಯಾಸ, ಶಂಬಲ ನಿಯಮ-ಒಂದರ ಅಭ್ಯಾಸ ಮಾಡಿ ಮತ್ತು ಯಾವಾಗಲೂ ಶಾಂತಿಯಿಂದ ಇರಿ.

2. ಎಲ್ಲ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಿ. ಇಡೀ ಜೀವನ ಆಧ್ಯಾತ್ಮಿಕ ಎಂದು ತಿಳಿಯಿರಿ.

3. ನಾವು ಜೀವನವನ್ನು ಸಂಪೂರ್ಣವಾಗಿ ಅನುಭವಿಸಬೇಕು, ಇಲ್ಲವಾದರೆ ಈ ಭೂಮಿಗೆ ಬಂದುದರ ಕಾರಣವನ್ನು ಸದುಪಯೋಗ ಮಾಡಿಕೊಂಡಂತೆ ಆಗುವುದಿಲ್ಲ.

4. ಈ ಪ್ರಪಂಚದ ವಾಸ್ತವತೆಗಳು, ಸೃಷ್ಟಿ ಮತ್ತು ಇಲ್ಲಿಗೆ ಬಂದುದರ ಸದುದ್ದೇಶಗಳನ್ನು ನಾವೆಲ್ಲ ಅರ್ಥ ಮಾಡಿಕೊಳ್ಳಬೇಕು. 2012ರ ಬಗ್ಗೆ ಹೊಸ ಜ್ಞಾನ, ಫೋಟಾನ್ ಬೆಲ್ಟ್ ಇತ್ಯಾದಿ ಹಾಗೂ ನಮ್ಮ ಸುತ್ತಮುತ್ತ ಮತ್ತು ಪ್ರಪಂಚದಲ್ಲಿ ಸಂಭವಿಸುವ ಘಟನೆಗಳ ಬಗ್ಗೆ ಎಚ್ಚರವಾಗಿದ್ದು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳಬೇಕು.

5. ನಮ್ಮ ಆಂತರಿಕ ಸಾಮರ್ಥ್ಯಗಳಾದ ಅಂತರ್ಗ್ರಹಣ ಶಕ್ತಿ ಮತ್ತು ಮೂರನೇ ಕಣ್ಣನ್ನು ಬಳಸಿಕೊಳ್ಳಲು ಪ್ರಾರಂಭಿಸಬೇಕು. ಮೂರನೇ ಕಣ್ಣಿನಿಂದ ನೋಡಲು ಸಾಧ್ಯವಾಗುವುದಕ್ಕೆ, ಸಪ್ತರ್ಷಿ ಪ್ರಾಣಾಯಾಮವನ್ನು ಮೂರು ಸಲ ಅಭ್ಯಾಸ ಮಾಡಿ. ನಂತರ ಮೂರನೇ ಕಣ್ಣಿನಿಂದ ನೋಡಿ.

6. ನಾವು ಋಷಿಗಳೊಡನೆ ನೇರ ಸಂಪರ್ಕ ಬೆಳೆಸಿಕೊಳ್ಳಬೇಕು. ಅವರು ನಮ್ಮನ್ನು ರಕ್ಷಿಸುತ್ತಾರೆ ಮತ್ತು ನಮ್ಮ ಜೀವನದ ಪ್ರತಿಯೊಂದು ವಿವರದಲ್ಲಿ ಅವರ ಮಾರ್ಗದರ್ಶನವಿರುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**10-01-2010**

ಒಬ್ಬ ವ್ಯಕ್ತಿ ಒಂದು ತಪ್ಪನ್ನು ಮಾಡಿದರು. ಅದರಿಂದ ನೋವನ್ನು ಅನುಭವಿಸಿ, ಆ ತಪ್ಪನ್ನು ಗುರುತಿಸಿದರು. ಪ್ರಾಮಾಣಿಕವಾಗಿ ತಮ್ಮ ತಪ್ಪಿಗೆ ಪರಿತಪಿಸಿ, ದೀರ್ಘಕಾಲದವರೆಗೆ ಧ್ಯಾನ ಮಾಡಿದರು. ಆಕೆಗೆ ನೆಮ್ಮದಿ ದೊರಕಿತು. 'ನಂಬಿಕೆ ಹೀಲ್ ಮಾಡುತ್ತದೆ ಮತ್ತು ಕ್ಷಮಾಯಾಚನೆ ಕೆಲಸ ಮಾಡುತ್ತದೆ.'

ಋಷಿಗಳ ವೈಖರಿಯ ವಿಶೇಷತೆಯೇ ಹಾಗೆ. ಅವರು ಯಾವುದನ್ನೂ ಮಾರುವುದಿಲ್ಲ, ವ್ಯಾಪಾರೀಕರಣ ಮಾಡುವುದಿಲ್ಲ ಅಥವಾ ಶೋಷಣೆ ಮಾಡುವುದಿಲ್ಲ.

ಯಾರು ಬೇಕಾದರೂ ಸಿದ್ಧರಾಗಿ, ಪರಬ್ರಹ್ಮ ಲೋಕಗಳಿಂದ ಹೊಸ ಚೈತನ್ಯಗಳನ್ನು ಮತ್ತು ಜ್ಞಾನವನ್ನು ನೇರವಾಗಿ ಪಡೆಯಬಹುದು. ಅವು ನಮ್ಮನ್ನು ಪ್ರವೇಶಿಸಲು ಕಾಯುತ್ತಿರುತ್ತವೆ.

ನೀವು ಕಂಡುಕೊಂಡ ಸತ್ಯ ಮತ್ತು ಮೌಲ್ಯಗಳನ್ನು ನಿಮ್ಮ ಬದುಕಿನಲ್ಲಿ ಪ್ರಯೋಗಿಸಿದಾಗ ಆಧ್ಯಾತ್ಮಿಕ ಪ್ರಪಂಚ ನಿಮಗಾಗಿ ತೆರೆದುಕೊಳ್ಳುತ್ತದೆ. ಶಂಬಲ ನಿಯಮ ಒಂದನ್ನು ಅಭ್ಯಾಸ ಮಾಡಿ. ಅದು ಶಾಂತತೆ, ನಿಶ್ಚಲತೆಯೆಡೆಗೆ ಕರೆದೊಯ್ಯುತ್ತದೆ. ಹಾಗೆಯೇ ನಾವು ದೈವದೊಡನೆ ಸಹಜವಾಗಿ ಸಂಪರ್ಕ ಪಡೆಯುತ್ತೇವೆ. ಈ ಸಂಪರ್ಕ ನಮ್ಮ ಬದುಕನ್ನು ಬದಲಿಸುತ್ತದೆ. ಶಾಂತತೆಯಿಂದ ಇರುವುದು ಮತ್ತು ಅದರಲ್ಲಿಯೇ ಮುಂದುವರಿಯುವುದರಿಂದ ಸಮಾಧಿಯ ಅನುಭವ ದೊರೆಯುತ್ತದೆ.

ಧ್ಯಾನದ ಕಾಲದಲ್ಲಿ ಅಥವಾ ನಂತರ ಅಥವಾ ಧ್ಯಾನ ಮಾಡದ ಸಮಯದಲ್ಲಿ ತಲೆ ಭಾರವೆನಿಸಿದರೆ ಅದು ಹೆಚ್ಚಿನ ಚೈತನ್ಯಗಳಿಂದ. ಇಂಥ ಸಮಯಗಳಲ್ಲಿ 5 ನಿಮಿಷಗಳ ಕಾಲ ವಿಶ್ರಮಿಸಿ. ಪ್ರೇಮದ ರಕ್ಷಾಕವಚ, ದೇವರ ಹಾಗೂ ಋಷಿಗಳ ಕೃಪೆ ನಮ್ಮನ್ನು ಯಾವಾಗಲೂ ರಕ್ಷಿಸುತ್ತವೆ.

ಅನುಭವಗಳು ನಮ್ಮ ಪ್ರಗತಿಯನ್ನು ಅಳೆಯುವುದಿಲ್ಲ. ಮನಸ್ಸಿನ ಹಂತದಲ್ಲಾಗುವ ಅನುಭವಗಳು ನಿಜವಾದವಲ್ಲ. ಆತ್ಮದ ಅನುಭವಗಳು ಪ್ರಾಮಾಣಿಕವಾದವು. ಸಮಾಧಿ, ಶಾಂತತೆ ಮತ್ತು ವಿಸ್ತರಣೆಗಳಂತೆ, ಅವು ನೈಜವಾದವು.

ಧ್ಯಾನಾಭ್ಯಾಸದಲ್ಲಿ ಯಾವಾಗಲೂ ಏರುಪೇರುಗಳಿರುತ್ತವೆ. ಅದಕ್ಕಾಗಿ ಚಿಂತಿಸಬೇಡಿ. ಎರಡನ್ನೂ ಸ್ವೀಕರಿಸಿ. ಯಾವುದೇ ಕ್ಷೇತ್ರದಲ್ಲಿ ಏರಿಳಿತಗಳು ಸಹಜ. ಋತುಗಳು ಬದಲಾಗುತ್ತವೆ. ಇದೇ ರೀತಿ ಚೈತನ್ಯಗಳ ಮಟ್ಟಗಳು ಕೂಡಾ ಬದಲಾಗುತ್ತವೆ.

ಎಲ್ಲ ಹಂತಗಳಲ್ಲಿ ಋಷಿಗಳಿಂದ ಜ್ಞಾನ, ಅದನ್ನು ಬೆಂಬಲಿಸುವ ತಂತ್ರಗಳು ಮತ್ತು ಹೊಸ ಚೈತನ್ಯಗಳಿಂದ ನಾವು ಮಾರ್ಗದರ್ಶನ ಪಡೆಯುತ್ತೇವೆ ಎಂಬುದನ್ನು ತಿಳಿದಿರಬೇಕು. ಇದು ನಮಗೆ ಆತ್ಮವಿಶ್ವಾಸ ನೀಡುತ್ತದೆ ಮತ್ತು ನಾವೆಲ್ಲಾ ಸುರಕ್ಷಿತ ಎನ್ನುವ ಭಾವನೆ ಉಂಟಾಗುತ್ತದೆ.

ಈಗಿನ ಮಕ್ಕಳು ಉನ್ನತ ಮಟ್ಟದ ಆಧ್ಯಾತ್ಮಿಕತೆಯೊಂದಿಗೆ ಜನಿಸುತ್ತಾರೆ. ಋಷಿಗಳು ಅವರನ್ನು ರಕ್ಷಿಸಿ, 2012ನ್ನು ದಾಟಲು ಸಹಾಯ ಮಾಡುತ್ತಾರೆ. ತಂದೆ, ತಾಯಿಗಳ ಆತಂಕ ಸಹಜ ಮತ್ತು ಮಾನವೀಯವಾದುದು. ನೀವು ಮಾನವೀಯವಾಗಿ ಇರಬೇಕಾದ ಸಂದರ್ಭದಲ್ಲಿ ದೈವಿಕವಾಗಿರಲು ಪ್ರಯತ್ನಿಸಬೇಡಿ! ಮಾನವ ಕುಲಕ್ಕೆ ವಿಸ್ಮಯತೆ ಅತ್ಯುನ್ನತ ಕೊಡುಗೆ. ಪ್ರತಿ ಬಾರಿ ಚಂದ್ರನನ್ನು ನೋಡಿದಾಗ, ಅದರ ಸೌಂದರ್ಯಕ್ಕೆ ನೀವು ವಿಸ್ಮಯ ಪಡಬೇಕು.

ಒಂದು ಸರಳ ಸತ್ಯ, 'ಬೆಳಕು ದೇವರು' ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಇದರ ಬಗ್ಗೆ ಚಿಂತಿಸಿ ಮತ್ತು ಅದನ್ನು ಅನ್ವೇಷಣೆ ಮಾಡಲು ಪ್ರಯತ್ನಿಸಿ. ಆಗ ನೀವು ಅನೇಕ ಅದ್ಭುತ ಸತ್ಯಗಳನ್ನು ತಿಳಿಯುವಿರಿ ಮತ್ತು ವಿಷಯಗಳನ್ನು ಹೆಚ್ಚು ಸ್ಪಷ್ಟವಾಗಿ ತಿಳಿಯುವಿರಿ.

ಪ್ರಪಂಚದ ಒಳಿತಿಗಾಗಿ ನಾವು ಕನಿಷ್ಠ ಪಕ್ಷ ಮಾಡಬಹುದಾದುದು ಎಂದರೆ, ಬೆಳಕಿನ ವಿಶ್ವ ಸಂಚಲನ. ಆಧ್ಯಾತ್ಮಿಕತೆ ಎನ್ನುವುದು ಪ್ರೇಮದ ವಿಸ್ತರಣೆ ಮತ್ತು ಅದನ್ನು ಕಾರ್ಯರೂಪಕ್ಕೆ ತರುವುದು.

**17-01-2010**

ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ಸ್ಪಂದಿಸುವಂಥ ಒಂದು ವೈಯಕ್ತಿಕ ಪ್ರಜ್ಞೆ ಇರುತ್ತದೆ. ಅದಕ್ಕೆ

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

ಭಾವನೆಗಳು ಮತ್ತು ಉದ್ವೇಗಗಳಿರುತ್ತವೆ.

ವಿಶ್ವಾಮಿತ್ರ ಮಹರ್ಷಿಗಳು ಶಾಂತತೆಯಿಂದ ಇರುವ ನಿಯಮವನ್ನು ನೀಡಿದರು. ಶಾಂತತೆಯಿಂದ ಇರಿ. ನೀವು ಅವರೊಂದಿಗೆ ಸಂಪರ್ಕ ಪಡೆಯುವಿರಿ ಮತ್ತು ನೀವು ಎಂದೂ ಶೋಷಣೆಗೆ ಗುರಿಯಾಗುವುದಿಲ್ಲ.

ನಾನು ಹೇಳಿದುದೆಲ್ಲ ಪ್ರಾಯೋಗಿಕವಾದುದು ಮತ್ತು ಜೀವನದಲ್ಲಿ ಅಳವಡಿಸುವಂಥವು. ನೀವು ಈ ಮಾರ್ಗವನ್ನು ಆರಿಸಿಕೊಂಡಿದ್ದೀರಿ. ಇಲ್ಲಿ ಕಲಿತುಕೊಂಡಿರುವುದನ್ನು ಅಳವಡಿಸಿಕೊಂಡಾಗ ನೀವು ಏನನ್ನೋ ಸ್ವಲ್ಪ ಕಳೆದುಕೊಳ್ಳುತ್ತೀರಿ. ಕಳೆದುಕೊಳ್ಳುವುದು ಒಳ್ಳೆಯದು. ನಾವು ಧ್ಯಾನವನ್ನು ಮಾಡುವುದು ಬೆಳೆಯುವುದಕ್ಕಾಗಿ. ಅದು ಬಹಳ ಸರಳ ಸತ್ಯ.

ಗ್ರಹಣ ಕಾಲದಲ್ಲಿ ಎರಡು ರೀತಿಯ ಚೈತನ್ಯಗಳು ಬಿಡುಗಡೆಯಾಗುತ್ತವೆ–ಭೌತಿಕ ಚೈತನ್ಯಗಳು ಮತ್ತು ಆಧ್ಯಾತ್ಮಿಕ ಚೈತನ್ಯಗಳು. ವಿಕಿರಣದಂಥ ಭೌತಿಕ ಚೈತನ್ಯಗಳನ್ನು ವಿಜ್ಞಾನಿಗಳ ಸಲಹೆಯಂತೆ ನಿರ್ವಹಿಸಬೇಕು. ಅತ್ಯಂತ ಸೂಕ್ಷ್ಮವಾದ ಆಧ್ಯಾತ್ಮಿಕ ಚೈತನ್ಯಗಳು ನಾವು ಆಹ್ವಾನಿಸದ ಹೊರತು ನಮ್ಮೊಳಗೆ ಅವು ಪ್ರವೇಶಿಸುವುದಿಲ್ಲ. ನಾವು ಧ್ಯಾನಮಾಡಿ, ಅವು ನಮ್ಮನ್ನು ಪ್ರವೇಶಿಸಲು ಅವಕಾಶ ನೀಡುತ್ತೇವೆ. ಅವು ನಮ್ಮ ಕರ್ಮಗಳನ್ನು ಹೋಗಲಾಡಿಸುತ್ತವೆ ಮತ್ತು ಹೀಲ್ ಮಾಡುತ್ತವೆ. ಅವು ನಮಗೆ ಯಥೇಚ್ಛವಾಗಿ ಅಂತಃಶಕ್ತಿಯನ್ನು ತರುತ್ತವೆ.

ಹೈಟಿಯಲ್ಲಾದ ಭೂಕಂಪದ ಬಗ್ಗೆ ಪ್ರಶ್ನೆಗಳಿಗೆ ನಮ್ಮಲ್ಲಿ ಉತ್ತರಗಳಿಲ್ಲ. ವಿಶ್ವ ಹೇಗೆ ಕೆಲಸ ಮಾಡುತ್ತದೆ ಎಂಬುದು ನಮಗೆ ಸಂಪೂರ್ಣವಾಗಿ ಅರ್ಥವಾಗುವುದಿಲ್ಲ. ಸೃಷ್ಟಿ ಮತ್ತು ನಾಶ ಜೊತೆಜೊತೆಯಲ್ಲಿಯೇ ಸಂಭವಿಸುತ್ತವೆ. ನಾವು ನಮ್ಮ ಪ್ರಾರ್ಥನೆ ಮತ್ತು ಚೈತನ್ಯಗಳನ್ನು ಯಾವುದೇ ಪ್ರದೇಶದಲ್ಲಾಗುವ ಅನಾಹುತ ಅಥವಾ ನೈಸರ್ಗಿಕ ವಿಪತ್ತುಗಳ ಕಡೆ ತಿರುಗಿಸಬೇಕು.

ನಾವು ಕೊಡುವ ಉತ್ತರಗಳು ವ್ಯಕ್ತಿಯ ಆಧ್ಯಾತ್ಮಿಕ ಮಟ್ಟವನ್ನು ಅನುಸರಿಸಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಒಂದೇ ಪ್ರಶ್ನೆಗೆ ನಮ್ಮ ಉತ್ತರಗಳು ಸ್ವಲ್ಪ ಭಿನ್ನ ರೀತಿಯಲ್ಲಿರುವುದಕ್ಕೆ ಕಾರಣ ಕೆಲವು ವಾಸ್ತವತೆಗಳ ಬದಲಾವಣೆ. ಜನರು ಕೂಡಾ ಆಧ್ಯಾತ್ಮಿಕವಾಗಿ ಬೆಳೆಯಬೇಕು.ಒಮ್ಮೆ ಮಾತನಾಡುವಾಗ ನಾನು 'ನೀತಿಗಳು ಮಾನವ ನಿರ್ಮಿತ' ಎಂದು ಹೇಳಿದ್ದೆ. ಆದರೆ 'ನೀತಿಗಳು ತಪ್ಪು' ಎಂದು ಯಾವಾಗಲೂ ಹೇಳಿಲ್ಲ. ಕೆಲವರು ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಜನರು ಬೆಳೆಯುವುದಕ್ಕಾಗಿ ನಾನು ಕಾಯಬೇಕಾಗಿದೆ.

ಸಾಧನೆ ಮತ್ತು ಧ್ಯಾನಗಳ ವಿಷಯದಲ್ಲಿ ಗಂಭೀರತೆ ಅತ್ಯಗತ್ಯ. ಇಲ್ಲಿ ಧ್ಯಾನ ಮಾಡುವವರಿಗೆ ಸಿಗುವ ಪ್ರಯೋಜನಗಳನ್ನು, ಋಷಿಗಳು ಪ್ರಪಂಚದ ಯಾವುದೇ ಭಾಗದಲ್ಲಿ ಧ್ಯಾನ ಮಾಡುವವರಿಗೂ ವಿಸ್ತರಿಸಿದ್ದಾರೆ. ಯಾವುದೇ ದಿನವಾದರೂ ಸರಿ, ಧ್ಯಾನ ಮಾಡಬೇಕೆಂಬ ನಿಜವಾದ ಸಂಕಲ್ಪವೇ ಸಾಕು.

ಭಾನುವಾರದ ತರಗತಿಗಳ ವೆಬ್ ನೇರಪ್ರಸಾರವು ಕೇವಲ ಏಕಕಾಲದಲ್ಲಿ ಆಲಿಸುವುದು ಮತ್ತು ವೀಕ್ಷಿಸುವುದಲ್ಲ. ನಿಮ್ಮನ್ನು ನೋಡದಿದ್ದರೂ ನಾನು ಇಲ್ಲಿ ಕುಳಿತುಕೊಂಡೇ ಒಂದು ರೀತಿಯ ಸಂಪರ್ಕವನ್ನು ಅನುಭವಿಸುತ್ತೇನೆ. ನನಗದು ಬಹಳ ಸಂತೋಷ ನೀಡಿದೆ. ವೆಬ್ ನೇರಪ್ರಸಾರಕ್ಕಾಗಿ ಶ್ರಮವಹಿಸಿದ ವಿಶಿಷ್ಟ ತಂಡವನ್ನು ಜನರು ಅಭಿನಂದಿಸಿದ್ದಾರೆ.

ಲೈಟ್ ಚಾನಲ್ಸ್ ಗ್ರೂಪಿನ ಜನರು ವಿವಿಧ ಶಾಲೆಗಳಿಗೆ ಹೋಗಿ ನೂರಾರು ವಿದ್ಯಾರ್ಥಿಗಳಿಂದ ಬೆಳಕನ್ನು ಚಾನಲ್ ಮಾಡಿಸಿದ್ದಾರೆ. ಅಂದರೆ ನಾವು ಮನಸ್ಸು ಮಾಡಿದರೆ ಕೆಲಸ ಮಾಡುತ್ತೇವೆ. ಇಲ್ಲವಾದರೆ ನಾವು ಮೈಗಳ್ಳತನ, ನುಣುಚಿಕೊಳ್ಳುವುದು ಅಥವಾ ವಂಚನೆ ಮಾಡುತ್ತೇವೆ.

### 24–01–2010

ನಾವು ಅನೇಕ ಸತ್ಯಗಳಿಗೆ, ಅನೇಕ ವಾಸ್ತವತೆಗಳಿಗೆ ಎಚ್ಚೆತ್ತುಕೊಳ್ಳಬೇಕು. ಅಜ್ಞಾನದಂಥ ಅಂಶಗಳಿಂದ ಕೂಡಾ ಎಚ್ಚೆತ್ತುಕೊಳ್ಳಬೇಕು.

ಒಬ್ಬನೇ ಒಬ್ಬ ದೇವರಿದ್ದಾನೆಂಬ ಸತ್ಯಕ್ಕೆ ಎಚ್ಚೆತ್ತುಕೊಳ್ಳಬೇಕು. ದೇವರು ಬೆಳಕು. ಎಲ್ಲ ದೇವರುಗಳು ಪರಬ್ರಹ್ಮನ ಸ್ವರೂಪವೇ. ಪ್ರತಿಮೆಗಳು ದೇವರನ್ನು ಪ್ರತಿನಿಧಿಸುತ್ತವೆ ಎಂಬ ವಾಸ್ತವತೆಯನ್ನು ಜನರು ಅರಿಯಬೇಕು. ದೇವರು ಚೈತನ್ಯ ಸ್ವರೂಪ. ಈ ಚೈತನ್ಯಗಳನ್ನು ಪ್ರತಿಮೆಯ ಕೆಳಗೆ, ನೆಲದಡಿಯಲ್ಲಿ ಶೇಖರಿಸಿಡಲಾಗುತ್ತದೆ.

ನಾವು ಪೂಜೆಯ ವಿಧಿ ವಿಧಾನಗಳಿಂದಾಚೆ ಹೋಗಬೇಕೆನ್ನುವ ವಾಸ್ತವಾಂಶಕ್ಕೆ ಎಚ್ಚರಗೊಳ್ಳಬೇಕಾಗಿದೆ. ನಾವು ಪೂಜೆಗಳನ್ನು ಮಾಡುವಷ್ಟು ಕಾಲವೂ ಪ್ರಜ್ಞಾಪೂರ್ವಕವಾಗಿ ದೇವರಿಂದ ದೂರ ಉಳಿಯುತ್ತೇವೆ, ಕಾರಣ ನಮ್ಮಲ್ಲಿ ದ್ವಂದ್ವ ಭಾವನೆ ಇರುತ್ತದೆ. ಪುಣ್ಯಗಳು ನಮ್ಮನ್ನು ಸ್ವರ್ಗಕ್ಕೆ ಕರೆದೊಯ್ಯುತ್ತವೆ, ಆದರೆ ಮುಕ್ತಿಗಳಿಸಿಕೊಡುವುದಿಲ್ಲ. ಹುಂಡಿಗಳಲ್ಲಿ ಹಣವನ್ನು ಹಾಕುವುದರಿಂದ ದೇವರನ್ನು ಮೆಚ್ಚಿಸಲಾಗುವುದಿಲ್ಲ.

ದೇವರು ಎಲ್ಲೆಡೆ ಇದ್ದಾನೆ, ದೇವಾಲಯಗಳಲ್ಲಿ ಮಾತ್ರವಲ್ಲ ಎಂಬುದನ್ನು ನಾವು ಮನಗಾಣಬೇಕು. ನಮ್ಮ ನಿರ್ಮಲ ಹೃದಯದಿಂದ ದೇವರ ಸಂಪರ್ಕ ಅತ್ಯಗತ್ಯ.

ಋಷಿಗಳು ಅಸ್ತಿತ್ವದಲ್ಲಿದ್ದಾರೆ ಎಂಬ ವಾಸ್ತವತೆಗೆ ನಾವು ಎಚ್ಚರಗೊಳ್ಳಬೇಕು. ಅವರು ನಮಗೆ ಸಹಾಯ ಮಾಡಲು ಸದಾ ಸಿದ್ಧ.

ನಮ್ಮ ಕರ್ಮಗಳನ್ನು ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ಒಂದು ದೊಡ್ಡ ವ್ಯವಸ್ಥೆ ಇದೆ ಎಂಬ ವಾಸ್ತವತೆಗೆ ಎಚ್ಚರಗೊಳ್ಳಬೇಕು.

ನಾವು ಬಹುಶಃ ಹೆಚ್ಚು ಬೆಳಕು ಅಥವಾ ಕಡಿಮೆ ಬೆಳಕಿರುವ ಎಲ್ಲ ಭೂಮಿಗಳಲ್ಲಿ ಬದುಕಿದ್ದೇವೆ. ಈ ವಾಸ್ತವತೆಗಳಿಗೆಲ್ಲ ನಾವು ಎಚ್ಚರವಾಗಬೇಕು. ಇವೆಲ್ಲಾ ನಮ್ಮನ್ನು ವಿವೇಕಿಗಳನ್ನಾಗಿ ಮಾಡುತ್ತವೆ.

ಒಳ್ಳೆಯವರಾಗಿರುವುದು ಮತ್ತು ಪ್ರಾಮಾಣಿಕರಾಗಿರುವುದೇ ಆಧ್ಯಾತ್ಮಿಕ ಎಂಬ ಸತ್ಯಕ್ಕೆ ನಾವು ಎಚ್ಚರಗೊಳ್ಳಬೇಕು. ಧ್ಯಾನ ಮಾಡದಿದ್ದರೂ ಆಧ್ಯಾತ್ಮಿಕವಾಗಿರಬಹುದು. ಮಾನವ ಕುಲಕ್ಕೆ ಋಷಿಗಳು ನೀಡಿದ ಅತ್ಯುನ್ನತ ಕಾಣಿಕೆ ಎಂದರೆ ಧ್ಯಾನ, ಕಾರಣ ಅದು ದೇವರ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ.

ಧ್ಯಾನದ ಬಗ್ಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ. ನಾನು, ವಿಶೇಷವಾಗಿ ಪ್ರಾರಂಭಿಕರಿಗೆ ನೀಡುವ ಸಲಹೆ ಎಂದರೆ ನಮ್ಮ ಪುಸ್ತಕಗಳನ್ನು ಓದಿ. ಪ್ರಶ್ನೆಗಳನ್ನು ಕೇಳುವ ಮೊದಲು ಅರ್ಥ ಮಾಡಿಕೊಳ್ಳಲು ಸ್ವಲ್ಪ ಪ್ರಯತ್ನಿಸಿ.

ಪ್ರಾಮಾಣಿಕವಾದ ಕಾರಣಗಳಿಂದ ನಿಮಗೆ ಧ್ಯಾನ ಮಾಡಲಾಗದಿದ್ದಲ್ಲಿ, ಬೆಳಕಿನ ಬಗ್ಗೆ ಚಿಂತಿಸಿ, ಬೆಳಕನ್ನು ಯಾವಾಗಲೂ ನಿಮ್ಮಲ್ಲಿ ಇಟ್ಟುಕೊಂಡು ಬೆಳಕನ್ನು ಅನುಭವಿಸಿ. ನೀವು ಧ್ಯಾನ ಮಾಡಿದರೆ ಮತ್ತು ನಿಮ್ಮೊಂದಿಗೆ ಬೆಳಕನ್ನು ಕೊಂಡೊಯ್ದರೆ, ನಿಮ್ಮ ಎಲ್ಲ ಸಮಸ್ಯೆಗಳು ಪರಿಹಾರವಾಗುವುದು. ಧ್ಯಾನಕ್ಕೆ ಬದ್ಧರಾಗಿರಿ.

ದೂರಕಲಿಕೆಯ ಸಾಧಕರು ತಮ್ಮ ಅಭ್ಯಾಸ ವರದಿಗಳನ್ನು, ಪ್ರಶ್ನೆಗಳನ್ನು ಮತ್ತು ತಮ್ಮ ಅನುಭವಗಳನ್ನು ಪ್ರತ್ಯೇಕವಾಗಿ ಬರೆದು ಕಳುಹಿಸಬೇಕು. ಕಾರಣ ಪ್ರತಿಯೊಂದನ್ನೂ ಬೇರೆ ಬೇರೆ ಜನರು ವ್ಯವಹರಿಸುತ್ತಾರೆ.

ನಮ್ಮ ಪ್ರತಿಯೊಂದು ಕ್ರಿಯೆ, ಪ್ರತಿಯೊಂದು ಆಲೋಚನೆ ಮತ್ತು ಪ್ರತಿ ಭಾವೋದ್ವೇಗ ಪ್ರಪಂಚದ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ ನಾವು ಜವಾಬ್ದಾರಿಯಿಂದ ಇರೋಣ. ಈ ವಿಷಯದ ಬಗ್ಗೆ ಚಿಂತಿಸಿ. ಯಾವುದೇ ಒಂದು ಸನ್ನಿವೇಶಕ್ಕೆ ಅಥವಾ ವ್ಯಕ್ತಿಗೆ ಪ್ರತಿಕ್ರಿಯಿಸುವ ಮೊದಲು ಒಂದು ಕ್ಷಣದ ವಿರಾಮ ಮತ್ತು ಶಾಂತಿ ಅಗಾಧ ವ್ಯತ್ಯಾಸ ಉಂಟುಮಾಡುತ್ತವೆ. ಸಾಧನೆಯು ಕೇವಲ ಜ್ಞಾನ ಪಡೆಯುವುದು, ಅರ್ಥಮಾಡಿಕೊಳ್ಳುವುದು ಮಾತ್ರವಲ್ಲ ನಮ್ಮ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳುವುದು.

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂ: ವೈಶಾಲಿ ಜೋಶಿ, ಅನು: ಪಾಂಡುರಂಗ

ಈ ದಿನ (9–2–10) ಮಲ್ಲೇಶ್ವರಂನ ಒಂದು ಶಾಲೆಯಲ್ಲಿ ಲೈಟ್ ಚಾನಲ್ ಸೆಷನ್ ಮುಗಿದ ನಂತರ ಒಬ್ಬ ಟೀಚರ್ ಕಣ್ಣಲ್ಲಿ ನೀರೂರಿದ್ದವು. "ನನ್ನ ಸನಿಹದಲ್ಲಿ ದೇವರನ್ನು ನಾನು ಅನುಭವಿಸಿದೆ" ಎಂದು ಅವರು ಪರವಶತೆಯಿಂದ ಹೇಳಿದರು.

–ಮನೋಜ್ ಚೋಪ್ರ

ನಿಮ್ಮ ಪುಸ್ತಕಗಳನ್ನು ನಾನು ಬಹಳ ಗೌರವಿಸುತ್ತೇನೆ. ನೀವು ಮಾಡುತ್ತಿರುವ ಕೆಲಸದಿಂದ ನಾನು ಬಹಳ ಪ್ರಭಾವಿತಳಾಗಿದ್ದೇನೆ. ಮೊಟ್ಟ ಮೊದಲ ಬಾರಿಗೆ ಅಮರರವರ ಭಾವಚಿತ್ರ ನೋಡುತ್ತಿದ್ದಂತೆ, ಈಗಾಗಲೇ ನನ್ನ ವಿಶನ್‌ನಲ್ಲಿ ಅವರನ್ನು ನೋಡಿದ್ದರಿಂದ ನಾನು ಅವರನ್ನು ತಕ್ಷಣ ಗುರುತಿಸಿದೆ. ಆ ವಿಶನ್‌ನಲ್ಲಿ ಏಳು ಶ್ವೇತ ವಸ್ತ್ರಧಾರಿ ಜನರು ಬಹಳ ಸೀರಿಯಸ್ಸಾಗಿ ಕೆಲಸ ಮಾಡುತ್ತಿದ್ದರು. ಅವರಲ್ಲಿ ನೀವು ಒಬ್ಬರಾಗಿದ್ದುದು ನನಗೆ ಚೆನ್ನಾಗಿ ನೆನಪಿದೆ. ಅವರೆಲ್ಲರೂ ಬೇರೆ ಗ್ಯಾಲಕ್ಸಿಗಳಿಂದ ಆಯ್ಕೆಮಾಡಿ ತೆಗೆದ ಚೈತನ್ಯಗಳನ್ನು ಚಾನಲ್ ಮಾಡುವುದರ ಮುಖಾಂತರ ನಮ್ಮ ಭೂಮಿಯ ಒಳಿತಿಗಾಗಿ ಕೆಲಸ ಮಾಡುತ್ತಿದ್ದರು.

–ಲಲಿತಾ ಸುಬ್ರಮಣ್ಯಂ

ನನ್ನ ಗುರು ಹಾಗೂ ದೇವರು ನನ್ನನ್ನು ನೋಡುತ್ತಿದ್ದಾರೆ ಮತ್ತು ಗಮನಿಸುತ್ತಿದ್ದಾರೆ, ಎಂದು ಆಗಾಗ್ಗೆ ನನ್ನನ್ನು ನಾನು ಎಚ್ಚರಿಸಿಕೊಳ್ಳುತ್ತೇನೆ. ಆದ್ದರಿಂದ ನಾನು ಅವರಿಗೆ ಅಗೌರವ ತರುವಂಥ ಮತ್ತು ಅವರ ಮಾರ್ಗದರ್ಶನಕ್ಕೆ ಧಕ್ಕೆ ತರುವಂಥ ತಪ್ಪುಗಳನ್ನು ಮಾಡದಂತೆ ಪ್ರಯತ್ನಿಸುತ್ತಿದ್ದೇನೆ. ಈ ನಂಬಿಕೆ ಅತ್ಯಧಿಕವಾಗಿ ಬೆಳೆದು ನನ್ನಲ್ಲಿ ಅಂತಃಶಕ್ತಿ ಮೂಡಿಸಿದೆ.

–ಗೀತಾ ಜೋಶಿ

2012ನೇ ಇಸವಿಯ ಸಿದ್ಧತೆಗೆ ಪ್ರಸ್ತುತ ಜೀವನದಿಂದ ಹೊರಬಂದು, ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದೆ. 'ನಂಬಿಕೆ ಎಂದರೆ, ಜೀವನವನ್ನು ಅದು ಇರುವ ಹಾಗೆಯೇ ಒಪ್ಪಿಕೊಳ್ಳುವುದು ಮತ್ತು ಈ ಜಗತ್ತಿನಲ್ಲಿ ನಮ್ಮ ಪಾತ್ರ ನಿರ್ವಹಣೆಗೆ ಸಂತೋಷದಿಂದ ಎಲ್ಲವನ್ನೂ ಸಮರ್ಪಿಸಬೇಕು' ಎಂಬ ಸರಳ ಸಂಗತಿ ಬಹಳ ದಿನಗಳವರೆಗೆ ನನಗೆ ಅರ್ಥವಾಗಿರಲಿಲ್ಲ. ಈ ಅರಿವಿನ ಜೊತೆಗೆ, ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಳ್ಳಲು ಒಂದು ಅತ್ಯುತ್ತಮ ಅವಕಾಶ ಈ ಪ್ರಪಂಚದಲ್ಲಿದೆ ಎಂಬುದನ್ನು ಅರ್ಥಮಾಡಿಕೊಂಡ ಮೇಲೆ ನಾನು ಹೊಸ ಮನುಷ್ಯಳಾಗಿದ್ದೇನೆ. ನಾನು ಮಾಡುವ ಕೆಲಸಗಳಲ್ಲಿ ಪ್ರಾಮಾಣಿಕಳಾಗಿ ಮತ್ತು ಜೀವನವನ್ನು ಸಮತೋಲನವಾಗಿ ನಿಭಾಯಿಸುವುದರಿಂದ ಈ ಪರಿವರ್ತನಾ ಕಾಲಕ್ಕೆ ಸಿದ್ಧಳಾಗಲು ನಿಶ್ಚಯಿಸಿದ್ದೇನೆ.

–ಲಿನ್ ಕರಾಟಾನಿ

## ತಪೋನಗರ ಡೈರಿ

ಸಂ: ಸೀಮಾ ಅಲ್‌ಮೇಲ್, ಅನು: ವರ್ಷಾ ಗುರ್ಜರ್

2010ರ ಜನವರಿ ತಿಂಗಳಲ್ಲಿ ಹಲವಾರು ಹೊಸ ಘಟನೆಗಳು ಆರಂಭವಾದವು. ತಪೋನಗರ ನಿವಾಸಿಗಳ ಕೂಟದಲ್ಲಿ ಸುತ್ತಮುತ್ತಲಿನ ಹಸಿರನ್ನು ಕಾಪಾಡಲು, ತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಅನೇಕ ಅಭಿಪ್ರಾಯಗಳು ಬಂದವು. ಯಾವುದೇ ಅಭಿಪ್ರಾಯದ ಉತ್ತಮ ಭಾಗ ಅದನ್ನು ತಕ್ಷಣ ಕಾರ್ಯರೂಪಕ್ಕೆ ತರುವುದು. ಶ್ರೀ. ಸ್ವಾಮಿನಾಥನ್ ನೇತೃತ್ವದಲ್ಲಿ ತಪೋನಗರ ನಿವಾಸಿಗಳೆಲ್ಲ ಬೆಳಗಿನ ಜಾವದಲ್ಲಿ ಸೇರಿ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛಗೊಳಿಸಿದರು.

ನಮ್ಮ ಜ್ಞಾನಾಭಿವೃದ್ಧಿಗೆ ಗುರೂಜಿಯವರು ಯಾವಾಗಲೂ ಓದುವುದಕ್ಕೆ ಒತ್ತುನೀಡುತ್ತಾರೆ. ಇದು ನಿವಾಸಿಗಳಿಗಾಗಿ ಒಂದು ಲೈಬ್ರರಿಯನ್ನು ಆರಂಭಿಸಲು ಪ್ರೇರೇಪಿಸಿತು. ಕೆಲವೇ ದಿನಗಳಲ್ಲಿ ಯುಟಿಲಿಟಿ ಬ್ಲಾಕ್‌ನ ಒಂದು ರೂಮನ್ನು ಸಿದ್ಧಪಡಿಸಿ, ಫೆಬ್ರವರಿ 1ರಂದು ಮಾನಸ ಲೈಬ್ರರಿಯನ್ನು ಆರಂಭಿಸಲಾಯಿತು. ವಾರದ ದಿನಗಳಲ್ಲಿ ಶ್ರೀಮತಿ ಸುನೀತಾ ದೇಶ್‌ಪಾಂಡೆಯವರು ಅದರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ.

ಕಾರ್ಯ ಮತ್ತು ಸಾಧನೆ ನಡುವಿನ ಅಂತರ ಕಡಿಮೆ ಆಗಿರುವುದು ಹೊಸಯುಗದ ಸಂಕೇತವಾಗಿರಬಹುದು. ಅದು ಗ್ರಹಣಗಳ ಪ್ರಭಾವದಿಂದ ಸಾಧ್ಯ ಆಗಿರಬಹುದು. ಒಂದು ತಿಂಗಳಲ್ಲಿ ಹದಿನೈದು ದಿನಗಳೊಳಗೆ ಎರಡು ಗ್ರಹಣಗಳು ಸಂಭವಿಸಿದವು. ಅಂದು ಧ್ಯಾನಿಗಳು ನೀಲಿ ಬೆಳಕನ್ನು ಇಡೀ ಭೂಮಿಗೆ ಚಾನಲ್ ಮಾಡಿದರು. ಋಷಿಗಳು ಗ್ರಹಣದ ಈ ಚೈತನ್ಯಗಳನ್ನು ಸಮಸ್ತ ಮನುಕುಲದ ಉದ್ಧಾರಕ್ಕಾಗಿ ತಪೋನಗರದಲ್ಲಿ ಸಂಗ್ರಹಿಸಿದರು.

ಫೆಬ್ರವರಿ 1ರಂದು ಆಯೋಜಿಸಿದ ಲೈಟ್ ಚಾನಲಿಂಗ್ ಕಾರ್ಯಕ್ರಮದ ಸಿದ್ಧತೆ ತಪೋನಗರ ಆಫೀಸಿನಲ್ಲಿ ಭರದಿಂದ ಸಾಗಿತ್ತು. ಮೊತ್ತ ಮೊದಲ ಬಾರಿ ಸುಮಾರು 60 ಜನ ಬೆಳಕಿನ ಕಾರ್ಯಕರ್ತರು ಸೇರಿಕೊಂಡು ತೀವ್ರತೆಯಿಂದ ಈ ಕೆಲಸವನ್ನು ಆರಂಭಿಸಿದರು.

ಕಳೆದ ವರ್ಷ ಶ್ರೀ. ವಿನಯ್ ಮತ್ತು ಶ್ರೀ. ಕವೀಂದ್ರ ಇವರು ತಮ್ಮ ವೃತ್ತಿ ಜೀವನವನ್ನು ತ್ಯಜಿಸಿ, ಋಷಿಗಳ ಕಾರ್ಯಕ್ಕಾಗಿ ತಪೋನಗರವನ್ನು ಸೇರಿದ್ದರು. ಈ ತಿಂಗಳು ಬಹುಕಾಲದಿಂದ ವಾಲಂಟಿಯರ್ ಆಗಿದ್ದ ಶ್ರೀ. ಪ್ರಶಾಂತ್ ಅದೇ ಉದ್ದೇಶಕ್ಕಾಗಿ ತಪೋನಗರ ಸೇರಿದರು.

ಫೆಬ್ರವರಿ ತಿಂಗಳು ನಿಜವಾಗಿಯೂ ಹೊಸ ಆರಂಭಗಳ ತಿಂಗಳಾಗಿತ್ತು. ■

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಬೆಳಕಿನ ಕಾರ್ಯಕರ್ತ ಎಂದರೆ ಯಾರು?**

ಉ: ಯಾರು ಬೆಳಕಿಗಾಗಿ ಕೆಲಸ ಮಾಡುತ್ತಾರೋ ಆತ ಬೆಳಕಿನ ಕಾರ್ಯಕರ್ತ. ಬೆಳಕಿನ ಕಾರ್ಯಕರ್ತ ಯಾವಾಗಲೂ ತನ್ನಲ್ಲಿ ಬೆಳಕನ್ನು ಹೊಂದಿರುತ್ತಾನೆ. ಅವನು ಬೆಳಕಿನೊಂದಿಗೆ ಲೀನವಾಗಿ ಬೆಳಕಿನಲ್ಲೇ ಜೀವಿಸುತ್ತಾನೆ. ಆತ ತನ್ನ ಜೀವಮಾನವಿಡೀ ಮತ್ತು ಎಲ್ಲ ಜೀವಿತಾವಧಿಗಳಲ್ಲಿ ಬೆಳಕಿಗೆ ಬದ್ಧನಾಗಿರುತ್ತಾನೆ.

**ಪ್ರ: 2012ರ ಬಗ್ಗೆ ನಾನು ಬೇರೆಯವರಿಗೆ ಏನೆಂದು ವಿವರಿಸಬಹುದು?**

ಉ: ನಾವು ಹೇಳುವುದನ್ನು ನೀವು ಸ್ಪಷ್ಟವಾಗಿ ಅರ್ಥಮಾಡಿಕೊಂಡರೆ, ವಿನಾಶದ ಬದಲು ಆಧ್ಯಾತ್ಮಿಕ ದೃಷ್ಟಿಕೋನದಿಂದ ಹೇಳುವಿರಿ. ನಾವು ಹೊಸ ಯುಗವನ್ನು ಪ್ರವೇಶಿಸುತ್ತೇವೆ, ಇದಕ್ಕೆ ಅರ್ಹರಾಗಲು ನಾವು ಪ್ರತಿದಿನ ಧ್ಯಾನ ಮಾಡಬೇಕು; ಪರಿಶುದ್ಧರಾಗಬೇಕು. ನಾವು ಪರಿವರ್ತನೆಗೊಂಡರೆ ಸುರಕ್ಷಿತವಾಗಿರುತ್ತೇವೆ. ಈ ಪ್ರಪಂಚ ಅಂತ್ಯವಾಗುವುದಿಲ್ಲ ಮತ್ತು ನಾವುಗಳು ಮಾಡುತ್ತಿರುವ ಕೆಲಸಗಳನ್ನು ನಿಲ್ಲಿಸಬಾರದು ಎಂದು ನಾವು ಹೇಳಬೇಕು.

**ಪ್ರ: 2012ರಲ್ಲಿ ಅನ್ಯಲೋಕ ಜೀವಿಗಳು ಬಂದು ಆಕಾಶನೌಕೆಯಲ್ಲಿ ನಮ್ಮನ್ನು ಕೊಂಡೊಯ್ಯುವರೇ?**

ಉ: ನಮಗೆ ಗೊತ್ತಿಲ್ಲ. ಅದು ಸಾಧ್ಯವೂ ಇರಬಹುದು.

**ಪ್ರ: 2012ರ ನಂತರ ಯಾವ ಯೋಗಗಳು ಹಳೆಯದಾಗುತ್ತವೆ?**

ಉ: 2012ರ ನಂತರ ಎಲ್ಲ ಯೋಗಗಳೂ ಹಳೆಯದಾಗುತ್ತವೆ. ಆಗ ಆಧ್ಯಾತ್ಮಿಕ ಅಭ್ಯಾಸಗಳ ಅವಶ್ಯಕತೆಯಿರುವುದಿಲ್ಲ. ನಾವು ಆಧ್ಯಾತ್ಮಿಕವಾಗಿ ಬದುಕುತ್ತೇವೆ. ಅಧ್ಯಾತ್ಮ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುತ್ತದೆ.

**ಪ್ರ: ಅಂತರ್ ಗ್ರಹಣ ಶಕ್ತಿ ಮತ್ತು ಆಲೋಚನೆಗಳ ನಡುವಿನ ವ್ಯತ್ಯಾಸವನ್ನು ನಾವು ಗುರುತಿಸುವುದು ಹೇಗೆ?**

ಉ: ಯಾವುದು ಥಟ್ಟನೆ ಹೊಳೆಯುವುದೋ ಅದು ಅಂತರ್‌ಗ್ರಹಣ ಶಕ್ತಿ. ಮೊದಲ ಆಲೋಚನೆ ಅಂತರ್‌ಗ್ರಹಣ ಶಕ್ತಿಯದ್ದಾಗಿದೆ. ಯಾವುದು ನೀವು ಚಿಂತನೆ ಮಾಡುವಂತೆ ಮಾಡುತ್ತದೋ ಅದು ಅಂತರ್ ಗ್ರಹಣ ಶಕ್ತಿಯಲ್ಲ. ವಿಶ್ಲೇಷಣೆಯು ವಿಚಾರ ಮಾಡುವುದರಿಂದ ಅಥವಾ ಪರಾಮರ್ಶೆಯಿಂದ ಬರುತ್ತದೆ.

**ಪ್ರ: ಈ ಮುಂದುವರಿದ ಕಾಲದಲ್ಲೂ ಯಾವ ಒಂದಂಶ ಆಧ್ಯಾತ್ಮಿಕ ಬೆಳವಣಿಗೆಯನ್ನು ಸೂಚಿಸುತ್ತದೆ?**

ಉ: ಏಕತೆ. ನಾವು ಏಕತೆಯನ್ನು ಅನುಭವಿಸಬೇಕು ಒಂದು ಗುಂಪಿನೊಂದಿಗೆ, ಈ ಭೂಮಿ ಮೇಲಿನ ಎಲ್ಲಾ ಜೀವಿಗಳೊಂದಿಗೆ, ಇಡೀ ಸೃಷ್ಟಿಯೊಂದಿಗೆ. ಏಕತೆಯನ್ನು ಅನುಭವಿಸಲು ನಾವು ಬಹಳ ಪ್ರಯತ್ನಿಸಬೇಕು. ನಮ್ಮ ಪ್ರಯತ್ನ ಪ್ರಾಮಾಣಿಕವಾಗಿರಬೇಕು. ಆಗ ಪ್ರೀತಿ ಹರಿಯುತ್ತದೆ. ನಾವು ಒಬ್ಬರನ್ನೊಬ್ಬರು ನಂಬಬೇಕು, ಆಗ ನಾವು ಹೃದಯ ಪೂರ್ವಕವಾಗಿ ಸ್ಪಂದಿಸಬಹುದು.

**ಪ್ರ: ನಾನು ನನ್ನ ನಕಾರಾತ್ಮಕಗಳನ್ನು ಏನು ಮಾಡಲಿ?**

ಉ: ನಿಮಗೆ ನಕಾರಾತ್ಮಕ ಎಂದು ಗೊತ್ತಿದ್ದರೆ ಅದನ್ನು ಹೊರಹಾಕಿ, ತಿರಸ್ಕರಿಸಿ. ಧ್ಯಾನ ಮಾಡಿ, ನಕಾರಾತ್ಮಗಳನ್ನು ಸುಟ್ಟುಬಿಡಿ, ಸಕಾರಾತ್ಮಕರಾಗಿ. ನಕಾರಾತ್ಮಗಳನ್ನು ಅಳಿಸಿ ಹಾಕಲು ಸಾಧ್ಯವಾದುದನ್ನೆಲ್ಲವನ್ನೂ ಮಾಡಿ
.

**ಪ್ರ: ಒಂದು ಆತ್ಮ, ಕಪ್ಪು ಆತ್ಮ ಆಗಬಹುದೇ?**

ಉ: ಹೌದು. ಕಪ್ಪು ಆತ್ಮ, ಬೆಳಕಿನ ಆತ್ಮ ಆಗುವ ಹಾಗೆ. ಇದು ದೇವರು ಆತನ ಸೃಷ್ಟಿಯ ಮೇಲೆ ಇಟ್ಟಿರುವ ಪ್ರೀತಿ.

**ಪ್ರ: ನಾವು ಬೇರೆ ಸ್ತರದಲ್ಲಿ ಬೆಳಕನ್ನು ಆಯ್ಕೆಮಾಡಿಕೊಂಡಿದ್ದೇವೆ ಎಂದು ಹೇಗೆ ತಿಳಿಯುವುದು?**

ಉ: ಯಾವುದೇ ಸ್ತರದಲ್ಲಿ ಏನೇ ಆದರೂ ಅದು ನಮಗೆ ತಿಳಿಯುತ್ತದೆ. ಆದರೆ ನೀವು ಬೇರೆ ಸ್ತರದಲ್ಲಿ ಬೆಳಕನ್ನು ಆಯ್ಕೆ ಮಾಡಿಕೊಂಡಿರುವುದು ಮತ್ತು ಈ ಸ್ತರದಲ್ಲಿ ಅದರ ಅರಿವಿಲ್ಲದಿರುವುದು ನಿಮಗೆ ಇನ್ನೂ ಮನದಟ್ಟಾಗಬೇಕಾದರೆ, ನಿಮ್ಮ ಆಲೋಚನೆ, ಭಾವೋದ್ವೇಗ ಹಾಗೂ ಕಾರ್ಯಗಳನ್ನು ಗಮನಿಸಿ. ಆಗ ನಿಮ್ಮ ನಡವಳಿಕೆಗಳು ನೀವು ಬೆಳಕನ್ನು ಆಯ್ಕೆ ಮಾಡಿರುವಿರೇ ಎಂಬುದನ್ನು ಹೇಳುತ್ತವೆ.

**ಪ್ರ: ನಮ್ಮ ಪೂರ್ವಜರ ಕರ್ಮಗಳನ್ನು ಕಳೆಯಲು ಏನಾದರೂ ತಂತ್ರವಿದೆಯೇ?**

ಉ: ಪೂರ್ವಜರ ಕರ್ಮಗಳನ್ನು ಮುಕ್ತಗೊಳಿಸಲು ಯಾವುದೇ ಪ್ರತ್ಯೇಕ ತಂತ್ರಗಳಿಲ್ಲ. ನಾವು ಹುಟ್ಟುವಾಗ ನೇರವಾಗಿ ನಮ್ಮ ತಂದೆ ತಾಯಿಗಳಿಂದ ಮತ್ತು ಪರೋಕ್ಷವಾಗಿ ಏಳು ತಲೆಮಾರುಗಳಿಂದ ಸ್ವಲ್ಪ ಭಾಗ ಕರ್ಮಗಳನ್ನು ಅನುವಂಶಿಕವಾಗಿ ಪಡೆಯುತ್ತೇವೆ. ನಾವು ಹೀಗೆ ಪಡೆದಿರುವ ಕರ್ಮಗಳನ್ನು ತೀರಿಸಬೇಕಾಗುತ್ತದೆ. ಹೀಗೆ ನಾವು ನಮ್ಮ ಪೂರ್ವಜರ ಕರ್ಮಗಳನ್ನು ತೀರಿಸುತ್ತೇವೆ.


**ಪ್ರ: ನಾವು ಪರಿವರ್ತನೆಗೊಳ್ಳದಿದ್ದರೆ ಬೇರೆ ಭೂಮಿಗಳಿಗೆ ಸ್ಥಳಾಂತರಿಸಲ್ಪಡುತ್ತೇವೆ ಎಂದು ಹೇಳಲಾಗಿದೆ. ಆಗ ನಮಗೆ ನಮ್ಮ ತಪ್ಪುಗಳ ಅರಿವಿರುತ್ತದೆಯೇ?**

ಉ: ನಮಗೆ ಯಾವಾಗಲೂ, ಇಲ್ಲಿದ್ದರೂ ಅಥವಾ ಬೇರೆ ಲೋಕದಲ್ಲಿದ್ದರೂ ನಮ್ಮ ತಪ್ಪುಗಳ ಅರಿವಿರುತ್ತದೆ. ನಾವು ಬದಲಾಗಲು ಆರಂಭಿಸದಿದ್ದರೆ, ಪ್ರಯತ್ನ ಪಡದಿದ್ದರೆ ನಮ್ಮ ಪಶ್ಚಾತ್ತಾಪ ಕೂಡ ಉಪಯೋಗ ವಾಗುವುದಿಲ್ಲ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Beyond 2012 | 80/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate - Dhyana Yoga | |
| - Descent of Soul - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| – ಧ್ಯಾನ ಮಾಡುವುದು ಹೇಗೆ – ಧ್ಯಾನ ಯೋಗ | |
| – ಆತ್ಮದ ಅವರೋಹಣ –ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| २०१२ नंतर (Marathi) | 80/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯುವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)

ಗುರೂಜಿಯವರ ಸೂಚನೆಯಂತೆ ನಾನು ಫೋಟಾನ್ ಬೆಲ್ಟ್-ಅನ್ನು ಆದರದಿಂದ ಸ್ವಾಗತಿಸಿದೆ. ಅದು ಒಂದು ಮರೆಯಲಾಗದ ಅನುಭವ. ಗುರೂಜಿಯವರ ನೇತೃತ್ವದಲ್ಲಿ ನಡೆದಂಥ ಈ ಘಟನೆಯನ್ನು ನಾನು ಇತರರೊಂದಿಗೆ ನೋಡಿದೆ. ನಾನು ಫೋಟಾನ್ ಬೆಲ್ಟ್-ಅನ್ನು, ನೀನು ಭೌತಿಕ ಶರೀರವನ್ನು ಹೊಂದಿರುವೆಯಾ ಎಂದು ಕೇಳಿದಾಗ, ಅದು ಇಲ್ಲವೆಂದು ಉತ್ತರಿಸಿತು. ಎಲ್ಲರೂ ಒಟ್ಟಾಗಿ ಅದನ್ನು ಸ್ವಾಗತಿಸಿದುದಕ್ಕೆ ತನಗೆ ಅತ್ಯಂತ ಸಂತೋಷವಾಯಿತೆಂದು ತಿಳಿಸಿತು. ನಾವೆಲ್ಲ ಗುರೂಜಿಯವರೊಂದಿಗೆ ಒಂದು ಛೇಂಬರ್ ಒಳಗೆ ಹೋಗಿ ಅಲ್ಲಿ ಬಹಳ ಚೈತನ್ಯಗಳನ್ನು ಪಡೆದೆವು.

–ಸುದೀಪ್ತ ಸಿ.ಕೆ.

ಹೇಗೋ ಪ್ರತಿದಿನ ನನ್ನ ಕಾಲುಗಳು ನನ್ನನ್ನು 'ದಿ ಗ್ರೇಟ್ ರಾ' ಧ್ಯಾನ ಮಂದಿರದ ಕಡೆಗೆ ಎಳೆದುಕೊಂಡು ಹೋಗುತ್ತವೆ. ನಾನೂ ಅತ್ಯಂತ ಸಂತೋಷದಿಂದ ಅಲ್ಲಿ ಹೋಗಿ ಧ್ಯಾನ ಮಾಡುತ್ತೇನೆ. ಧ್ಯಾನದಲ್ಲಿ ನನ್ನ ಅಸ್ತಿತ್ವದ ಅರಿವಿಲ್ಲದಂತಹ ಹಂತವನ್ನು ನಾನು ಅನುಭವಿಸಿ, ಆನಂದಿಸುತ್ತೇನೆ. ಬೇರೆ ಬೇರೆ ಹಂತದ ಪ್ರಜ್ಞಾವಸ್ಥೆಗೆ ಹೋಗಿ ಹಿಂತಿರುಗುವುದು ಒಂದು ಸುಂದರವಾದ ಅನುಭವ. ಒಂದು ಸಾರಿ ನಾನು ಅಸ್ತಿತ್ವದ ಅರಿವಿಲ್ಲದ ಹಾಗೂ ಯೋಚನಾರಹಿತವಾದ ಪ್ರಜ್ಞಾವಸ್ಥೆಗೆ ಹೋಗಿದ್ದೆ. ಆಗ ನಾನು ಒಂದು ಮರದಂತೆ ನಿಶ್ಚಲವಾಗಿದ್ದೆ. ನಾನಾಗ ಶೂನ್ಯ ಭಾವದಲ್ಲಿದ್ದರೂ, ಆ ಸ್ಥಿತಿ ಪರಿಪೂರ್ಣವಾಗಿತ್ತು.

–ವಿದ್ಯಾ ವಿಶ್ವಾಮಿತ್ರ

ಏಳು ಚಕ್ರಗಳನ್ನು ಒಟ್ಟಿಗೆ ಸಚೇತನಗೊಳಿಸುವ ಹಂತದ ವಿಸ್ತರಣಾ ಅವಧಿಯಲ್ಲಿ ನನ್ನ ಧ್ಯಾನ ಅದ್ಭುತವೆನಿಸಿದೆ. ಆಸಕ್ತಿ ಹಾಗೂ ದೃಢತೆ ಹೆಚ್ಚಾಗಿದೆ. ಧ್ಯಾನ ಮಾಡುತ್ತಿರುವಾಗ ಚಕ್ರಗಳ ಜಾಗದಲ್ಲಿ ಪ್ರಕಾಶಮಾನವಾದ ಬೆಳಕು ತುಂಬಿ, ಸಹಸ್ರಾರದಲ್ಲಿ ಹೂವಿನಂತೆ ಅರಳಿ ಚಿಮ್ಮುತ್ತದೆ. ಸ್ವಲ್ಪ ಹೊತ್ತಿನ ನಂತರ ನಾನು ಒಂದು ದಿವ್ಯ ಲೋಕಕ್ಕೆ ಹೋದಂತೆ ಅನಿಸಿ ಅಲ್ಲಿನ ನಿಶ್ಯಬ್ದ, ತೃಪ್ತಿಕರ ಹಾಗೂ ಬೆಳಕಿನಿಂದ ಕೂಡಿದ ವಾತಾವರಣ ನನ್ನನ್ನು ತುಂಬಿದಂತೆ ಅನಿಸುತ್ತದೆ. ಆಗಾಗ್ಗೆ ಅನುಭವಿಸುವ ಈ ಸ್ಥಿತಿಯನ್ನು ವರ್ಣಿಸಲಸಾಧ್ಯ.

ಒಂದು ದಿನ ಲೈಟ್ ಚಾನಲಿಂಗ್ ಮಾಡುತ್ತಿರುವಾಗ ಸ್ವಯಂ ನೀಲಿ ಬಣ್ಣದ ಈಶ್ವರ ನನ್ನೆದುರು ಕುಳಿತು ಲೈಟ್ ಚಾನಲಿಂಗ್ ಮಾಡುತ್ತಿದ್ದರು. ಆಗ ಭೂಮಿ ನೀಲಿ ಹರಳಿನಂತೆ ಹೊಳೆಯುತ್ತಿತ್ತು.

ರಕ್ಷಾಕವಚ ಬಲಪಡಿಸುವಾಗಲೂ ದಿವ್ಯಲೋಕದಲ್ಲಿ ಸಂಚರಿಸಿದಂತಾಗಿ, ಅಲ್ಲಿನ ನೀಲಿ ಬೆಳಕು ರಕ್ಷಾಕವಚವನ್ನು ಬಲಪಡಿಸಿದ ಅನುಭವವಾಗುತ್ತದೆ. ಧ್ಯಾನದಿಂದ ನನ್ನಲ್ಲಿ ಗಮನಾರ್ಹ ಬದಲಾವಣೆಗಳಾಗಿ ಬಹಳ ನೆಮ್ಮದಿ ಸಿಕ್ಕಿದೆ.

–ಶಶಿಕಲಾ ಜಿ


### ಫಾರಂ ೪ (ರೂಲ್ ೮)ರಂತೆ

**"ತಪೋವಾಣಿ"** ಕನ್ನಡ ವಾರ್ತಾಪತ್ರದ ಮಾಲೀಕತ್ವ ಮತ್ತು ಇತರ ವಿವರಗಳು

| | | |
|---|---|---|
| 1. | ಪತ್ರಿಕೆಯ ಹೆಸರು | ತಪೋವಾಣಿ |
| 2. | ರಿಜಿಸ್ಟ್ರೇಷನ್ ನಂಬರ್ | KARKAN/2003/13739 |
| 3. | ಪ್ರಕಟಣೆಯ ಸ್ಥಳ | ಬೆಂಗಳೂರು |
| 4. | ಪ್ರಕಟಣೆಯ ಅವಧಿ | ತಿಂಗಳಿಗೊಮ್ಮೆ |
| 5. | ಮುದ್ರಕರು, ಪ್ರಕಾಶಕರು ಮತ್ತು ಸಂಪಾದಕರ ಹೆಸರು | ಶ್ಯಾಮಲಾದೇವಿ |
| | ರಾಷ್ಟ್ರೀಯತೆ | ಭಾರತೀಯರು |
| | ವಿಳಾಸ | ತಪೋನಗರ, ಚಿಕ್ಕಗುಬ್ಬಿ, ಹೆಣ್ಣೂರು–ಬಾಗಲೂರು ರೋಡ್ ಬೆಂಗಳೂರು ಅರ್ಬನ್ –562149 |
| 6. | ಮುದ್ರಣವಾಗುವ ಸ್ಥಳ | ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು –560086 |
| 7. | ಮಾಲೀಕರ ಹೆಸರು | ಮಾನಸ ಫೌಂಡೇಶನ್(ರಿ) |

ನಾನು, ಶ್ಯಾಮಲಾದೇವಿ, ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ವಿವರಗಳು ನನ್ನ ತಿಳಿವಳಿಕೆ, ನನ್ನ ನಂಬಿಕೆ ಪ್ರಕಾರ ಸಂಪೂರ್ಣ ಸತ್ಯವಾಗಿವೆ.

ಸಹಿ

ಬೆಂಗಳೂರು

ಶ್ಯಾಮಲಾದೇವಿ

ತಾ: 25–2–2010

ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು



ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 562 149. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ